1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ

Spl.C.150/2023

ದಿಃ 11.09.2025
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-12 Pw-9

ಹೆಸರು ಃ ಪದ್ಮಶಂಕರ್
ತಂದೆಯ ಹೆಸರು ಃ ಲೇ. ಚುಂಚೇಗೌಡ
ವಯಸ್ಸು ಃ 53 ವರ್ಷ
ಉದ್ಯೋಗ ಃ ಎಎಸ್ಐ,
ಕನಕಪುರ ನಗರ
ಪೊಲೀಸ್ ಠಾಣೆ
ವಾಸಸ್ಥಳ ಃ ಕನಕಪುರ

ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

2014ರಿಂದ 2024ರವರೆಗೆ ನಾನು ಕನಕಪುರ ಗ್ರಾಮಾಂತರ ಠಾಣೆಯಲ್ಲಿ ಮುಖ್ಯಪೇದೆಯಾಗಿದ್ದು ಭಡ್ತಿ ಹೊಂದಿದ ನಂತರ ಎಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ12.08.2023ರಂದು ಸಂಜೆ 5.00 ಗಂಟೆಗೆ ಪಿರ್ಯಾದಿ ನಾಗಮ್ಮ ಠಾಣೆಗೆ ಹಾಜರಾಗಿ ನೀಡಿದಂತಹ ದೂರನ್ನು ಸ್ವೀಕರಿಸಿಕೊಂಡು ಗುನ್ನೆ ಸಂಖ್ಯೆ.138/2023ರಲ್ಲಿ ದಾಖಲಿಸಿಕೊಂಡಿರುತ್ತೇನೆ. ಸದರಿ ದೂರು ನಿ.ಪಿ.1 ಇದ್ದು, ಅದನ್ನು ಸ್ವೀಕರಿಸಿದ ಸಲುವಾಗಿ ಸಹಿ ಮಾಡಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ಸದರಿ ದೂರಿನನ್ವಯ ಪ್ರ.ವ.ಮಾಹಿತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದು ಅದನ್ನು ಈಗ ನೋಡುತ್ತಿದ್ದು ನಿ.ಪಿ.11 ಹಾಗೂ ಸಾಕ್ಷಿ ಗುರುತಿಸಿರುವಂತಹ ತನ್ನ ಸಹಿಯನ್ನು 11(ಎ) ಎಂದು ಗುರುತಿಸಲಾಯಿತು.

3. ಮುಂದಿನ ತನಿಖೆಗೆಂದು ಪ್ರಕರಣದ ಕಡತವನ್ನು ಚಾಸಾ.13ರವರಿಗೆ ವಹಿಸಿರುತ್ತೇನೆ.

<u>ಪಾಟೀ ಸವಾಲುಃ ಶ್ರೀ. ಡಿ.ಆರ್.ಜೆ., ವಕೀಲರಿಂದ ಆರೋಪಿಯ ಪರವಾಗಿಃ</u>

ನಾನು ಅಂದು ಠಾಣಾ ಕರ್ತವ್ಯದಲ್ಲಿದ್ದೇನೆ ಎಂದು ತೋರಿಸಲು ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಘಟನೆಯು ದಿಃ12.08.2023ರಂದು ಬೆಳಿಗ್ಗೆ 10.00 ಗಂಟೆ ಸಮಯದಲ್ಲಿ ವಾಡೆದೊಡ್ಡಿಯಲ್ಲಿ ನಡೆದಿರುತ್ತದೆ. ಪಿರ್ಯಾದಿಯಲ್ಲಿ ಪಿರ್ಯಾದಿಯ ಹೆಬ್ಬೆಟ್ಟು ಇರುವ ಕಾರಣ ಆಕೆ ಅವಿದ್ಯಾವಂತೆ ಎಂದರೆ ಸರಿ. ಪಿರ್ಯಾದುದಾರಳು ತನ್ನ ಮನೆಯ ಜಾಗದ ವಿಚಾರವಾಗಿ ತನಗೆ ಮತ್ತು ಆರೋಪಿಗೆ ಇರುವಂತಹ ತಕರಾರಿಗೆ ಸಂಬಂಧಿಸಿದಂತೆ ಠಾಣೆಗೆ ಬಂದಿದ್ದು ನಾವು ಆಕೆಯಿಂದ ಠಾಣೆಯಲ್ಲಿ ಸುಳ್ಳು ದೂರು ಬರೆಸಿರುತ್ತೇವೆ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆದಿಲ್ಲ, ನಮ್ಮ ಠಾಣಾ ಅಂಕಿ-ಅಂಶಕ್ಕೋಸ್ಕರ ಸುಳ್ಳು ದೂರು ದಾಖಲು ಮಾಡಲಾಗಿದೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಎಂ.ಪಂಚಾಕ್ಷರಿ)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.